(*b*) the inconvenience that will be caused by the introduction of prohibition simultaneously throughout the State ;

A.—Sri T. CHANNIAH (Minister for Public Health and Local Self-Government).—

(*a*) It is not possible to specify the time required for the introduction of Prohibition throughout State as it depends on several factors. The matter is at present being considered on an All-India basis and the recommendations of the Prohibition Enquiry Committee set up by the Planning Commission are receiving the active consideration of Government.

(*b*) The question is not clear. While there might be considerable inconvenience to addicts, the inconvenience to Government is likely to be the loss of Excise Revenue to the tune of Rupees 1½ crores.

ಶ್ರೀ ಎಚ್. ಟಿ. ಪುಟ್ಟಪ್ಪ.—ಪಾನನಿರೋಧವನ್ನು ಜಾರಿಗೆ ತರುವ ತತ್ವವು ಮಹಾತ್ಮಾ ಗಾಂಧಿಯವರ ತತ್ವಗಳಲ್ಲಿ ಒಂದಲ್ಲವೇ?

ಅಧ್ಯಕ್ಷರು.—ಅದು ಎಲ್ಲರಿಗೂ ಗೊತ್ತಿದೆ. ಬೇರೆ ಪ್ರಶ್ನೆ ಕೇಳಿ.

ಶ್ರೀ ಎಚ್. ಟಿ. ಪುಟ್ಟಪ್ಪ.—Excise ಬಾಬಿನಿಂದ ಬರುವ ಉತ್ಪತ್ತಿಯಿಂದಲೇ ಸರ್ಕಾರವನ್ನು ನಡೆಸ ಬೇಕೆಂಬ ನೀತಿ ಸರ್ಕಾರಕ್ಕೆ ಇದೆಯೇ?

ಶ್ರೀ ಟಿ. ಚನ್ನಯ್ಯ.—ಆ ನೀತಿ ಸರ್ಕಾರದಲ್ಲಿ ಇಲ್ಲ.

ಶ್ರೀ ಎಚ್. ಕೆ. ಸಿದ್ದಯ್ಯ.—ಪಾನನಿರೋಧ ಪೂರ್ತಿಯಾಗಿ ಜಾರಿಗೆ ತಂದರೆ 1½ ಕೋಟಿ ರೂಪಾಯಿ excise ಹುಟ್ಟುವಳಿ ಪೂರ್ತಿಯಾಗಿ ನಷ್ಟವಾಗುವ ಸಂಭವವಿದೆ ಎಂದು ತಿಳಿದುಕೊಳ್ಳೋಣವೇ? ಆಮೇಲೆ ಸಂಪೂರ್ಣವಾಗಿ ಮೈನೂರು ದೇಶದಿಂದ ಹೆಂಡದ ಇಲಾಖೆ ಬಿಟ್ಟು ಹೋಗುತ್ತದೆ ಎಂದು ತಿಳಿದು ಕೊಳ್ಳೋಣವೇ?

ಶ್ರೀ ಟಿ. ಚನ್ನಯ್ಯ.—ಸಂಪೂರ್ಣವಾಗಿ ತೆಗೆದು ಹಾಕಬೇಕೇ ಬೇಡವೇ ಎಂಬ ವಿಷಯದಲ್ಲಿ ಸರ್ಕಾರ ಇನ್ನೂ ಅಂತ್ಯ ತೀರ್ಮಾನ ತೆಗೆದುಕೊಂಡಿಲ್ಲ.

ಶ್ರೀ ಬಿ. ರಾಚಯ್ಯ.—ಎಷ್ಟು ವರ್ಷಗಳಲ್ಲಿ total prohibition ತರಬೇಕು ಎಂದು ಇದ್ದೀರಿ?

ಶ್ರೀ ಟಿ. ಚನ್ನಯ್ಯ.—Prohibition Enquiry Committee ನೇಮಕವಾಗಿ ಅವರ ಶಿಫಾರ್ಸುಗಳನ್ನು Planning Commission ಅವರಿಗೆ ಕಳುಹಿಸಿ ಕೊಟ್ಟಿದ್ದಾರೆ. 1st April 1956 ಹೊತ್ತಿಗೆ ಸಂಪೂರ್ಣವಾಗಿ ಪಾನನಿರೋಧವನ್ನು ಜಾರಿಗೆ ತರ ಬೇಕೆಂದು ಉದ್ದೇಶಿಸಿರುವ ಅವರ ಶಿಫಾರಸುಗಳು ಭಾರತ ಸರ್ಕಾರದ ಮತ್ತು ನಮ್ಮ ಸರ್ಕಾರದ ಪರ್ಯಾಲೋಚನೆಯಲ್ಲಿವೆ. ಇನ್ನೂ ಯಾವ ತೀರ್ಮಾನ ವನ್ನೂ ತೆಗೆದುಕೊಂಡಿಲ್ಲ.

ಶ್ರೀ ಬಿ. ರಾಚಯ್ಯ.—Actual ಆಗಿ drinkingನ್ನು ತೆಗೆಯಬೇಕು ಎಂದು ಇರುವುದರಿಂದ ಈ ವರ್ಷ ಯಾವ ಯಾವ ತಾಲ್ಲೂಕುಗಳಲ್ಲಿ ಪಾನನಿರೋಧ ವನ್ನು introduce ಮಾಡಿದ್ದೀರಿ?

ಶ್ರೀ ಟಿ. ಚನ್ನಯ್ಯ.—ಇನ್ನೂ ಯಾವ ತೀರ್ಮಾನ ವನ್ನೂ ತೆಗೆದುಕೊಂಡಿಲ್ಲ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಕದ್ದು ಹೆಂಡ ಕುಡಿಯುವವರನ್ನು ಹಿಡಿಯುವವರು ಯಾರು?

Mr. SPEAKER.—It does not arise.

Sri K. S. VASAN.—What are the several factors on which prohibition on state-wide scale depends?

Sri T. CHANNIAH.—If depends upon several factors. The fact that drinking is injurious to public health is one of the important considerations. Prohibition is in force in some parts of the State. The question of introducting it throughout the State is under the active consideration of Government.

Sri SYDNEY A. THOMAS.—Is it the policy of the Government to cause inconvenience to the people by introducing Prohibition?

Sri T. CHANNIAH.—It is not inconvenient to all people. It is inconvenient to some extent to addicts.

Chief Executive Officers attached to District Boards.

Q.—326. Sri M. CHIKKALINGIAH (Malavalli—Scheduled Castes).—

Will the Government be pleased to state :—

(*a*) whether it is not a fact that the Chief Executive Officers attached to the District Boards in the State are civilian officers ;

(*b*) the nature of the work undertaken by the District Boards ;

(*c*) the nature of the work that these officers have been entrusted ;

(*d*) the subrodinate staff attached to these officers ?

A.—Sri T. CHANNIAH (Minister for Public Health and Local Self-Government).—

(*a*) Yes.

(*b*) *Vide* Sections 86 and 87 of the Village Panchayets and District Boards Act of 1952.

(*c*) *Vide* Section 71 of the Village Panchayets and District Boards Act of 1952.

(SRI T. CHANNIAH.)

(*d*)The ministerial staff of each District Board Office consists of a Head Clerk, an Accountant, 1st and 2nd Division Clerks, Mutchis, Peons, etc., and the Executive staff comprises Graduate Overseers, Sub overseers, Health Inspectors, Midwives, etc. The number varies from one District Board to another.

ಶ್ರೀ ಎಂ. ಚಿಕ್ಕಲಿಂಗಯ್ಯ.—ಡಿಸ್ಟ್ರಿಕ್ಟ್ ಬೋರ್ಡ್ ಮತ್ತು ವಿಲೇಜ್ ಪಂಚಾಯಿತಿಗಳ ಕೆಲಸ ಕಾರ್ಯಗಳು Technical nature ಆದ್ದರಿಂದ Civilian Officerಗಳಿಗೆ ಅನುಭವ ಸಾಲದು ಎಂಬುದು ನರ್ಕಾರದ ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ಸಿವಿಲಿಯನ್ ಆಫೀಸರುಗಳಿಗೆ ಡಿಸ್ಟ್ರಿಕ್ ಬೋರ್ಡ್ ಕಾರ್ಯಕ್ರಮಗಳನ್ನು ನಡೆಸುವುದಕ್ಕೆ ಅರ್ಹತೆ ಇದೆ ಎಂದು ನೇಮಕ ಮಾಡಿದೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—Technical Training ಆಗದೆ ಇರುವುದರಿಂದ Subordinate Officers ಮಾಡಿದ್ದನ್ನು ಸರಿಯಾಗಿ ನೋಡದೆ countersign ಮಾಡಿರುವುದು ಗಮನಕ್ಕೆ ಬಂದಿದೆಯೇ ?

ಶ್ರೀ ಟಿ. ಚನ್ನಯ್ಯ.—ರಸ್ತೆ ಕಾಮಗಾರಿಗಳು ಮತ್ತು ಇತರ ಕಾಮಗಾರಿಗಳಲ್ಲಿ ತರಬೇತು ಪಡೆದಿರ ತಕ್ಕ ಆಫೀಸರುಗಳು ಬೇರೆ ಇದ್ದಾರೆ. ಅವರಿಗೆ ಸೂಚನೆ ಕೊಟ್ಟು ಕೆಲಸ ಕಾರ್ಯಗಳನ್ನು ನಡೆಸುವುದು ಅವರ ಕರ್ತವ್ಯ.

ಶ್ರೀ ಎಂ. ಚಿಕ್ಕಲಿಂಗಯ್ಯ.—Bill ಪಾಸ್ ಮಾಡುವಾಗ ಕೆಳಪಟ್ಟ ಅಧಿಕಾರಿಗಳು scrutiny ಮಾಡಿದ್ದಾರೆಯೇ ಕೆಲಸ ನಡೆದಿದೆಯೇ, ಇಲ್ಲವೇ ಎಂಬುದನ್ನು ನೋಡಿಕೊಂಡು ತಾನೆ ಪರಿಶೀಲನೆ ಮಾಡಿ countersign ಮಾಡುವುದು ?

ಶ್ರೀ ಟಿ. ಚನ ಯ್ಯ.—ಸಾಮಾನ್ಯವಾಗಿ ಅವರೇ check ಮಾಡುತ್ತಾರೆ. Executive Officers check measurement ಮಾಡಿ ಸರಿಯಾಗಿದೆ ಎಂದು ತಿಳಿದಮೇಲೆ ಬಿಲ್‌ಗಳನ್ನು ಪಾಸ್ ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—Subordinate Officers ತಪ್ಪು ಮಾಡಿದರೆ rectify ಮಾಡುವುದಕ್ಕೋಸ್ಕರ ಮೇಲಧಿಕಾರಿಗಳು ಇರುವುದರಿಂದ ಸಬ್ ಓವರ್‌ಸಿಯರು ಮಾಡುವ ಕೆಲಸದಲ್ಲಿ ನ್ಯೂನತೆ ಗಳಿದ್ದರೆ technical ಆಗಿ ಆ ನ್ಯೂನತೆಗಳನ್ನು rectify ಮಾಡುವುದಕ್ಕೆ ಇವರಿಗೆ ಸಾಧ್ಯವಾಗುತ್ತದೆಯೇ ?

ಶ್ರೀ ಟಿ. ಚನ್ನಯ್ಯ.—ಲುಕ್ಸಾನು ಲೆಖ್ಖಗಳಿಂದ ಎಷ್ಟರಮಟ್ಟಿಗೆ ಖರ್ಚಾಗಿದೆ ಎಂಬುದನ್ನು ಕಂಡುಹಿಡಿಯುವುದನ್ನು ಯಾರು ಬೇಕಾದರೂ ಮಾಡಬಹುದು.

ಶ್ರೀ ಎಂ. ಚಿಕ್ಕಲಿಂಗಯ್ಯ.—ಬರೇ ಲೆಖ್ಖಗಳು ಮಾತ್ರವಲ್ಲ nature of the work ಸರಿಯಾಗಿ ನಡೆಯುತ್ತಿದೆಯೇ ಇಲ್ಲವೇ ಎಂಬುದನ್ನು certify ಮಾಡುವುದಕ್ಕೆ ಸಾಧ್ಯವೇ ?

ಶ್ರೀ ಟಿ. ಚನ್ನಯ್ಯ.—ಅವರು ಕೆಲಸಕ್ಕೆ ಹೋದ ಕಾಲದಲ್ಲಿ general lineನಲ್ಲಿದ್ದರೂ ಕೂಡ ಕೆಲವು technical aspects of the work ತಿಳಿದು ಕೊಂಡಿರುವುದು ಅವರ ಕರ್ತವ್ಯ. ಅದರ ಪ್ರಕಾರ ಯಾವ ಯಾವ ಕೆಲಸ ಎಷ್ಟರಮಟ್ಟಿಗೆ ನಡೆದಿದೆ ಎಂದು Sub-overseerಗಳು ಮತ್ತು Overseerಗಳು ಮಾಡುವ ಕೆಲಸವನ್ನೂ ಕೂಡ ನೋಡಿ, ಅವರು ಎಷ್ಟು ಖರ್ಚು ಮಾಡಿದ್ದಾರೆ, ಎಷ್ಟು ಹಣ ಖರ್ಚು ಮಾಡಬೇಕು ಎಂಬುದನ್ನು ಅವರು ಸ್ಥಳಗಳಿಗೆ ಹೋಗಿ ತನಿಖೆ ಮಾಡಿ bill pass ಮಾಡುತ್ತಾರೆ.

ಶ್ರೀ ಎಂ. ಚಿಕ್ಕಲಿಂಗಯ್ಯ.—Nature of work ಹೀಗಿರುವುದರಿಂದ ಸಿವಿಲಿಯರ್ಸ್ ಆಫೀಸರಿಗೆ ಬದಲು Assistant Engineersನ್ನು ನೇಮಕ ಮಾಡಲು ಸಾಧ್ಯವೇ ?

ಶ್ರೀ ಟಿ. ಚನ್ನಯ್ಯ.—ಅವಶ್ಯಕತೆ ಕಂಡು ಬಂದಿಲ್ಲ. ಅದಕ್ಕೋಸ್ಕರ ನೇಮಕ ಮಾಡಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಪ್ರತಿಯೊಂದು Estimate ಕೂಡ Engineering ಇಲಾಖೆಗೆ scrutinyಗಾಗಿ ಹೋಗಬೇಕೆಂಬುದು ಗೊತ್ತಿದೆಯೇ?

ಶ್ರೀ ಟಿ. ಚನ್ನಯ್ಯ.—ಕೆಲವು ಹೋಗುತ್ತವೆ. ಸಣ್ಣ ಸಣ್ಣವು ಹೋಗಬೇಕಾಗಿಲ್ಲ.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಕೆಲವು ಕಡೆ ರಸ್ತೆಗಳಿಗೆ materials collect ಮಾಡುತ್ತಾರೆ. ಇಂಥಿಂಥ ಕಡೆ ಇಷ್ಟಿಷ್ಟು lead ಕೊಡಬೇಕೆಂಬುದು technical men ಗೆ ಗೊತ್ತಿದೆ. ಅವರಿಗೆ ಏನೇನೂ ಗೊತ್ತಿಲ್ಲ ಎಂದು ಹೇಳಿದರೆ ಒಪ್ಪಿಕೊಳ್ಳುತ್ತೀರಾ ?

ಶ್ರೀ ಟಿ. ಚನ್ನಯ್ಯ.—ಅದನ್ನು ಪರಿಶೀಲನೆ ಮಾಡಬೇಕು.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಈ ವಿಷಯದಲ್ಲಿ ಹಿಂದೆ ಜಿಲ್ಲಾ ಬೋರ್ಡಿನ ಅಧ್ಯಕ್ಷರುಗಳ ಸಭೆಗೆ ಮಾನ್ಯ ಮುಖ್ಯಮಂತ್ರಿಗಳು ಹೋಗಿದ್ದಾಗ ಅಲ್ಲಿ ಚೀಫ್ ಎಗ್ಜಿಕ್ಯುಟಿವ್ ಆಫೀಸರುಗಳಿಗೆ ಏನೇನೂ ಗೊತ್ತಿಲ್ಲ, ಆದಕಾರಣ Assistant Engineerಗಳನ್ನು ಅವರಿಗೆ ಬದಲು ನೇಮಕ ಮಾಡಬೇಕೆಂದು ಹೇಳಿದ್ದು ಜ್ಞಾಪಕವಿದೆಯೇ ?

ಶ್ರೀ ಟಿ. ಚನ್ನಯ್ಯ.—ಜಿಲ್ಲಾ ಬೋರ್ಡಿನವರು ಮಾಡತಕ್ಕ estimateಗಳನ್ನು P. W. D. ಇಲಾಖೆಯವರು scrutiny ಮಾಡುತ್ತಾರೆ.

MR. SPEAKER.—The question is whether the Government or the Chief Minister promised to give them technical assistance through an Assistant Engineer ?

SRI T. CHANNIAH.—We have not made any promise.

ಶ್ರೀ ಜಿ. ಎಸ್. ಬೊಮ್ಮೇಗೌಡ.—ಮುಖ್ಯಮಂತ್ರಿಗಳು ಇದ್ದಾರೆ, ಅವರು ಅಷ್ಟಣೆ ಕೊಡಿಸಬೇಕು.

ಶ್ರೀ ಕೆ. ಹನುಮಂತಯ್ಯ.—ನನಗೆ ಮರೆತು ಹೋಗಿದೆ.

12-30 P. M.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಇಂಜಿನಿಯರಿಂಗ್ ಇಲಾಖೆಯವರು ಕೊಟ್ಟಿದ್ದಕ್ಕೆಲ್ಲಾ ಈ ಎಗ್ಜಿಕ್ಯೂಟಿವ್ ಆಫೀಸರುಗಳು ನುಮ್ಮನೆ ಕೌಂಟರ್ ಸೈನ್ ಮಾಡುವುದು ತಪ್ಪಿಗೆ ಗೊತ್ತಿದೆಯೆ ?

ಶ್ರೀ ಟಿ. ಚನ್ನಯ್ಯ.—ಹಾಗೆ ಹೇಳುವುದಕ್ಕಾಗುವುದಿಲ್ಲ.

ಶ್ರೀ ಎಸ್. ಸಿದ್ದಪ್ಪ.—ಓವರ್‌ಸಿಯರುಗಳು, ಸಬ್ ಓವರ್‌ಸಿಯರುಗಳು ಮಾಡಿದ ಕೆಲಸಗಳನ್ನು ಈ ಎಗ್ಜಿಕ್ಯುಟಿವ್ ಆಫೀಸರು ತನಿಖೆಮಾಡುತ್ತಾರಲ್ಲವೆ ?

ಶ್ರೀ ಟಿ. ಚನ್ನಯ್ಯ.—ಹೌದು.

ಶ್ರೀ ಎಸ್. ಸಿದ್ದಪ್ಪ.—ಹಿಂದೆ ಖಾನಗಿ ಅಧ್ಯಕ್ಷರು ಮತ್ತು ಉಪಾಧ್ಯಕ್ಷರುಗಳಿದ್ದರು, ಅವರೂ ತನಿಖೆ

ಮಾಡುತ್ತಿದ್ದರು. ಅವರು ಟೆಕ್ನಿಕಲ್ ಪೀಪಲ್ ಆಗಿರಲ್ಲಿಲ್ಲ, ಅಲ್ಲವೇ ?

ಶ್ರೀ ಟಿ. ಚನ್ನಯ್ಯ.—ಹೌದು.

L.F. Dispensary at Bukinakere village.

Q.—365. Sri S. M. LINGAPPA (Krishnarajpet).—

Will the Government be pleased to state :—

(*a*) when they sanctioned the L.F. Dispensary to Bukinakere village ;

(*b*) whether it has come to their notice that the villagers of Bukinakere are constantly urging the Government for the immediate construction of Hospital building at Bukinakere ;

(*c*) if so, the action taken by them ?

A.—Sri T. CHANNIAH (Minister for Public Health and Local Self-Government.—

(*a*) On 3rd June 1943.

(*b*) Yes.

(*c*) Collection of donations from the public and contribution from the local bodies towards the building fund is awaited.

ಶ್ರೀ ಎಸ್. ಎಂ. ಲಿಂಗಪ್ಪ.—ಬೂಕಿನಕೆರೆ ಗ್ರಾಮಸ್ಥರು ಎಂಟು ವರ್ಷಗಳ ಹಿಂದೆ ಈ ಕಟ್ಟಡದ ಬಗ್ಗೆ ಹಣವನ್ನು ಡಿಪಾಜಿಟ್ ಮಾಡಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೆ ?

ಶ್ರೀ ಟಿ. ಚನ್ನಯ್ಯ.—ಬಂದಿದೆ.

ಶ್ರೀ ಎಸ್. ಎಂ. ಲಿಂಗಪ್ಪ.—ಇದನ್ನು ಒಪ್ಪಿಕೊಳ್ಳುತ್ತೀರಿ, ಆದರೆ (ಸಿ) ಭಾಗದ ಉತ್ತರದಲ್ಲಿ ಇನ್ನೂ ಅವರ ಭಾಗದ ಹಣ ಕೊಟ್ಟಿಲ್ಲವೆಂದು ತಿಳಿಸಿದ್ದೀರಿ. ಇದರಲ್ಲಿ ಯಾವ ಉತ್ತರ ಸರಿ ?

ಶ್ರೀ ಟಿ. ಚನ್ನಯ್ಯ.—ಈ ಆಸ್ಪತ್ರೆ ಕಟ್ಟಡಕ್ಕೆ ಸುಮಾರು 26 ಸಾವಿರ ರೂಪಾಯಿಗೆ ಅಂದಾಜಾಗಿದೆ. ಈ ಹಣವನ್ನು ಸಾರ್ವಜನಿಕರಿಂದ ಡೊನೇಷ್ನ್ ಮತ್ತು ಸ್ಥಳೀಯ ಸಂಸ್ಥೆಗಳಿಂದ ಕಾಂಟ್ರಿಬ್ಯೂಷನ್ ರೂಪದಲ್ಲಿ ಕೊಡಬೇಕೆಂದು ಸೂಚನೆ ಕೊಟ್ಟಿದೆವೆ. ಈ ಎರಡು ಕಡೆಗಳಿಂದಲೂ ಸಾಕಷ್ಟು ಹಣವನೂಲಾಗಿಲ್ಲ.

ಶ್ರೀ ಎಸ್. ಎಂ. ಲಿಂಗಪ್ಪ.—ಇದರಲ್ಲಿ ಸಾರ್ವಜನಿಕರ ಭಾಗ ಎಷ್ಟು ಕೊಡಬೇಕು ?

ಶ್ರೀ ಟಿ. ಚನ್ನಯ್ಯ.—ಕಟ್ಟಡಕ್ಕೆ ಎಷ್ಟಾಗುತ್ತದೆ ಅದರಲ್ಲಿ ಅರ್ಧ ಭಾಗ ಸರ್ಕಾರದವರು ಕೊಡುತ್ತಾರೆ. ಇನ್ನರ್ಧ ಭಾಗವನ್ನು ಸ್ಥಳೀಯ ಸಂಸ್ಥೆಗಳೂ ಸಾರ್ವಜನಿಕರೂ ಕೊಡಬೇಕು.

ಶ್ರೀ ಎಸ್. ಎಂ. ಲಿಂಗಪ್ಪ.—ಮಂಡ್ಯ ಜಿಲ್ಲಾ ಬೋರ್ಡಿನವರು ಎಷ್ಟು ಕೊಡುತ್ತೇವೆಂದು ನಿರ್ಣಯ ಮಾಡಿದ್ದಾರೆ ?

ಶ್ರೀ ಟಿ. ಚನ್ನಯ್ಯ.—ಇನ್ನೂ ನಮಗೆ ತಿಳಿಸಿಲ್ಲ.

Reservation of beds to workers of the Kirloskar Ltd., in the Maternity Hospital at Harihar.

Q.—397. Sri K. S. VASAN (Kolar Gold Fields).—

Will the Government be pleased to state :—

(*a*) if they have reserved some beds in the newly started maternity hospital at Harihar for use by the workers (and their dependants) of the Kirloskar, Ltd. ;

(*b*) if contributions from workers for this purpose have been asked for ?

Sri T. CHANNIAH (Minister for Public Health and Local Self-Government).—

(*a*) No.

(*b*) No.

Sri K. S. VASAN.—Are the Government aware that the management of the Kirloskar Ltd., have collected a few thousands of rupees for this purpose from their workers ?

Sri T. CHANNIAH.—Government are not aware.

Sri K. S. VASAN.—If they have collected, will the Government direct the management of that concern to return the money to the workers ?

Sri T. CHANNIAH.—We have called for this information from the D. M. O., Chitaldrug.

Health Centre for Akkirampur.

Q.—442. Sri MUDDURAMIAH (Koratagere-Madhugiri).—

Will the Government be pleased to state:—

(*a*) whether it is not a fact that the residents of Akkirampur, Holavanahalli hobli, Koratagere taluk, have been requesting them from a long time for the establishment of a Health Centre since malaria is rampant round about that place ;

(*b*) the steps taken by them in this matter ?